## ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಮ್ಮುಖದಲ್ಲಿ (ಸಕ್ಷಮ ಪ್ರಾಧಿಕಾರಿ–ಬೆಂಗಳೂರು)

**ಕಡತ ಸಂಖ್ಯೆ: ಗ್ರಾಅಪ 919 ಗ್ರಾಪಂಅ 2020, ದಿನಾಂಕ: 22.02.2022.**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ವಾದಿ
ಹಾವೇರಿ ಜಿಲ್ಲಾ ಪಂಚಾಯತ್, ಹಾವೇರಿ.

ವಿರುದ್ಧ

1) ಶ್ರೀಮತಿ ಬಸಮ್ಮ ಮರಿಯಪ್ಪ ಹರಿಜನ, ಮಾಜಿ ಉಪಾಧ್ಯಕ್ಷರು.
2) ಶ್ರೀಮತಿ ರೇಖಾ ಸುನೀಲ ಹೊನ್ನತ್ತಿ, ಮಾಜಿ ಸದಸ್ಯರು.
3) ಶ್ರೀಮತಿ ಪೂರ್ಣಿಮ ನಾಗೇಶ್ ಬಸಮ್ಮನವರ, ಮಾಜಿ ಸದಸ್ಯರು.
4) ಶ್ರೀಮತಿ ಸರೋಜಾ ಗುಡ್ಡಪ್ಪ ಹೊಂಕಣದವರ, ಮಾಜಿ ಸದಸ್ಯರು.
5) ಶ್ರೀ ಶ್ರೀಕಾಂತ ಯಲ್ಲಪ್ಪ ಸಾವಕ್ಕನವರ, ಮಾಜಿ ಸದಸ್ಯರು. ಪ್ರತಿವಾದಿಗಳು

ಶ್ಯಾಡಗುಪ್ಪಿ ಗ್ರಾಮ ಪಂಚಾಯಿತಿ,
ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ.

**ಪ್ರಸ್ತಾವನೆ:**

ಶ್ರೀಮತಿ ಬಸಮ್ಮ ಮರಿಯಪ್ಪ ಹರಿಜನ, ಮಾಜಿ ಉಪಾಧ್ಯಕ್ಷರು ಹಾಗೂ ಮಾಜಿ ಸದಸ್ಯರುಗಳಾದ 1) ಶ್ರೀಮತಿ ರೇಖಾ ಸುನೀಲ ಹೊನ್ನತ್ತಿ, 2) ಶ್ರೀಮತಿ ಪೂರ್ಣಿಮ ನಾಗೇಶ್ ಬಸಮ್ಮನವರ, 3) ಶ್ರೀಮತಿ ಸರೋಜಾ ಗುಡ್ಡಪ್ಪ ಹೊಂಕಣದವರ, 4) ಶ್ರೀಕಾಂತ ಯಲ್ಲಪ್ಪ ಸಾವಕ್ಕನವರ, ಶ್ಯಾಡಗುಪ್ಪಿ ಗ್ರಾಮ ಪಂಚಾಯಿತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರು ತಮ್ಮ ಅಧಿಕಾರಾವಧಿಯಲ್ಲಿ 14 ನೇ ಹಣಕಾಸು ಮತ್ತು ವರ್ಗ–1ರ ಅನುದಾನದ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಹಾನಗಲ್ಲ ಇವರು ವಿಚಾರಣೆ ನಡೆಸಿ 1) ಶ್ರೀಮತಿ ಬಸಮ್ಮ ಮರಿಯಪ್ಪ ಹರಿಜನ, ಉಪಾಧ್ಯಕ್ಷರು, ಇವರ ಪತಿ ಹೆಸರಿಗೆ 14,224/–, 2) ಶ್ರೀಮತಿ ರೇಖಾ ಸುನೀಲ ಹೊನ್ನತ್ತಿ , ಸದಸ್ಯರು, ಇವರ ಪತಿ ಹೆಸರಿಗೆ 18,206/–, 3) ಶ್ರೀಮತಿ ಪೂರ್ಣಿಮ ನಾಗೇಶ್ ಬಸಮ್ಮನವರ, ಸದಸ್ಯರು, ಇವರ ಪತಿ ಹೆಸರಿಗೆ 6,700/–, 4) ಶ್ರೀಮತಿ ಸರೋಜಾ ಗುಡ್ಡಪ್ಪ ಹೊಂಕಣದವರ, ಸದಸ್ಯರು ಇವರ ಪತಿ ಹೆಸರಿಗೆ 25,979/– ಹಾಗೂ 5) ಶ್ರೀಕಾಂತ ಯಲ್ಲಪ್ಪ ಸಾವಕ್ಕನವರ, ಸದಸ್ಯರು ಇವರ ಹೆಸರಿಗೆ 11,700/–ಗಳು ಸಂದಾಯವಾಗಿದ್ದು, ಸದಸ್ಯರುಗಳು ತಮ್ಮ ಕುಟುಂಬದ ಸದಸ್ಯರುಗಳಿಗೆ ಮತ್ತು ತಮ್ಮ ಹೆಸರಿಗೆ ಚೆಕ್ ವಿತರಿಸಿಕೊಂಡು ಹಣ ದುರುಪಯೋಗಪಡಿಸಿಕೊಂಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಇವರು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1135 ಗ್ರಾಪಂಅ 2018. ದಿನಾಂಕ: 02.02.2019 ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿರುವಂತೆ ಸದರಿ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ದಿನಾಂಕ: 11.05.2020 ರಂದು ಪ್ರಾದೇಶಿಕ ಆಯುಕ್ತರು ಬೆಳಗಾವಿ ವಿಭಾಗ, ಬೆಳಗಾವಿ ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

..2

ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರು ಪ್ರಕರಣದ ವಿಚಾರಣೆ ನಡೆಸಿ, ಪ್ರಕರಣದ ವಿಚಾರಣೆ ಕಾಲಕ್ಕೆ ಎಲ್ಲಾ ಆರೋಪಿಗಳು ತನ್ನ ಹೆಸರಿನಲ್ಲಿ ಹಾಗೂ ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ಚೆಕ್‌ಗಳನ್ನು ಪಡೆದಿರುವ ಬಗ್ಗೆ ಕಂಡುಬಂದಿರುತ್ತದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಎದುರುದಾರರ ಹೇಳಿಕೆಗಳನ್ನು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ವಿಚಾರಣೆ ಕಾಲಕ್ಕೆ ಸಲ್ಲಿಸಿದ ಎನ್.ಎಂ.ಆರ್ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ಪ್ರಕರಣದ ಎಲ್ಲಾ ಆರೋಪಿಗಳ ಮೇಲಿನ ಆರೋಪವು ಸಾಬೀತಾಗಿದ್ದು, ಇವರುಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ರ ನಿಬಂಧನೆಗಳನ್ನು ಉಲ್ಲಂಘಿಸಿರುವುದರಿಂದ ಸದರಿಯವರ ಸದಸ್ಯತ್ವವನ್ನು ರದ್ದುಗೊಳಿಸುವಂತೆ ಅಭಿಪ್ರಾಯಪಟ್ಟು ದಿನಾಂಕ: 14.09.2020 ರಂದು ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

ವಿಚಾರಣಾ ವರದಿಯನ್ವಯ ಎದುರುದಾರರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲು ದಿನಾಂಕ: 28.12.2020 ರಂದು ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಹಾನಗಲ್ಲರವರು ಸದರಿ ಆಪಾದಿತರಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿರುವ ಬಗ್ಗೆ ದಿನಾಂಕ: 08.01.2021 ರಂದು ವರದಿಯನ್ನು ಸಲ್ಲಿಸಿರುತ್ತಾರೆ. ಈ ನೋಟೀಸ್‌ಗೆ ಸದರಿಯವರು ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

ಈ ಪ್ರಕರಣದಲ್ಲಿ ಎಸಗಿದ್ದಾರೆ ಎನ್ನಲಾದ ಆಪಾದನೆಗಳ ಕುರಿತು ಎದುರುದಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂಚಾಯತ್ ರಾಜ್) ರವರ ನ್ಯಾಯಾಲಯದಲ್ಲಿ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಅಧಿಕಾರಿಗಳೊಂದಿಗೆ ದಿನಾಂಕ: 08.12.2021 ರಂದು ಮೌಖಿಕ ವಿಚಾರಣೆಗೆ ಒಳಪಡಿಸಲಾಗಿರುತ್ತದೆ.

ದಿನಾಂಕ: 08.12.2021 ರಂದು ನಡೆದ ವಿಚಾರಣೆಯಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಅಧಿಕಾರಿ / ನೌಕರರು ಹಾಗೂ ಈ ಪ್ರಕರಣದಲ್ಲಿನ ಎಲ್ಲಾ ಎದುರುದಾರರು ವಿಚಾರಣೆಗೆ ಹಾಜರಿದ್ದು, ಗ್ರಾಮ ಪಂಚಾಯಿತಿಯಿಂದ ಬ್ಯಾಂಕ್ ಬಹಳ ದೂರವಿದ್ದುದರಿಂದ ಹಾಗೂ ಕಾನೂನಿನ ತಿಳುವಳಿಕೆಯಿಲ್ಲದ್ದರಿಂದ ತಮ್ಮ ಮತ್ತು ತಮ್ಮ ಪತಿಯಂದಿರ ಹೆಸರಿನಲ್ಲಿ ಚೆಕ್ ಪಡೆದಿರುವುದಾಗಿ ಎದುರುದಾರರು ಒಪ್ಪಿಕೊಂಡಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಹಾವೇರಿ ಇವರು ಸಲ್ಲಿಸಿರುವ ದಾಖಲೆಗಳು ಹಾಗೂ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ರವರ ವರದಿಯನುಸಾರ ಎದುರುದಾರರ ವಿರುದ್ಧ ಮಾಡಲಾದ ಆಪಾದನೆಗಳು ಸಾಬೀತಾಗಿರುವುದು ವಿಚಾರಣಾ ಸಮಯದಲ್ಲಿ ಕಂಡು ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀಮತಿ ಬಸಮ್ಮ ಮರಿಯಪ್ಪ ಹರಿಜನ, ಮಾಜಿ ಉಪಾಧ್ಯಕ್ಷರು ಹಾಗೂ ಮಾಜಿ ಸದಸ್ಯರುಗಳಾದ 1) ಶ್ರೀಮತಿ ರೇಖಾ ಸುನೀಲ ಹೊನ್ನತ್ತಿ, 2) ಶ್ರೀಮತಿ ಪೂರ್ಣಿಮ ನಾಗೇಶ್ ಬಸಮ್ಮನವರ, 3) ಶ್ರೀಮತಿ ಸರೋಜಾ ಗುಡ್ಡಪ್ಪ ಹೊಂಕಣದವರ, 4) ಶ್ರೀಕಾಂತ ಯಲ್ಲಪ್ಪ ಸಾವಕ್ಕನವರ, ಶ್ಯಾಡಗುಪ್ಪಿ ಗ್ರಾಮ ಪಂಚಾಯಿತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರುಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ)(vi) ರಡಿ ಹಾಗೂ ಸದರಿ ಅಧಿನಿಯಮದ ಪ್ರಕರಣ 12(ಎಲ್) ರಡಿಯ ಪರಂತು (ಇ) ರನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಆದೇಶ ಮಾಡಲು ಅವಕಾಶವಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶ್ರೀಮತಿ ಬಸಮ್ಮ ಮರಿಯಪ್ಪ ಹರಿಜನ, ಮಾಜಿ ಉಪಾಧ್ಯಕ್ಷರು ಹಾಗೂ ಮಾಜಿ ಸದಸ್ಯರುಗಳಾದ 1) ಶ್ರೀಮತಿ ರೇಖಾ ಸುನೀಲ ಹೊನ್ನತ್ತಿ, 2) ಶ್ರೀಮತಿ ಪೂರ್ಣಿಮ ನಾಗೇಶ್ ಬಸಮ್ಮನವರ, 3) ಶ್ರೀಮತಿ ಸರೋಜಾ ಗುಡ್ಡಪ್ಪ ಹೊಂಕಣದವರ, 4) ಶ್ರೀ ಶ್ರೀಕಾಂತ ಯಲ್ಲಪ್ಪ ಸಾವಕ್ಕನವರ, ಶ್ಯಾಡಗುಪ್ಪಿ ಗ್ರಾಮ ಪಂಚಾಯಿತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ ಇವರುಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ)(vi) ರಡಿ ಹಾಗೂ ಸದರಿ ಅಧಿನಿಯಮದ ಪ್ರಕರಣ 12(ಎಲ್) ರಡಿಯ ಪರಂತು (ಇ) ರನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ,

1. ಶ್ರೀಮತಿ ಬಸಮ್ಮ ಮರಿಯಪ್ಪ ಹರಿಜನ, ಮಾಜಿ ಉಪಾಧ್ಯಕ್ಷರು, ಶ್ಯಾಡಗುಪ್ಪಿ ಗ್ರಾಮ ಪಂಚಾಯಿತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ.
2. ಶ್ರೀಮತಿ ರೇಖಾ ಸುನೀಲ ಹೊನ್ನತ್ತಿ, ಮಾಜಿ ಸದಸ್ಯರು, ಶ್ಯಾಡಗುಪ್ಪಿ ಗ್ರಾಮ ಪಂಚಾಯಿತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ.
3. ಶ್ರೀಮತಿ ಪೂರ್ಣಿಮ ನಾಗೇಶ್ ಬಸಮ್ಮನವರ, ಮಾಜಿ ಸದಸ್ಯರು, ಶ್ಯಾಡಗುಪ್ಪಿ ಗ್ರಾಮ ಪಂಚಾಯಿತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ.
4. ಶ್ರೀಮತಿ ಸರೋಜಾ ಗುಡ್ಡಪ್ಪ ಹೊಂಕಣದವರ, ಮಾಜಿ ಸದಸ್ಯರು, ಶ್ಯಾಡಗುಪ್ಪಿ ಗ್ರಾಮ ಪಂಚಾಯಿತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ.
5. ಶ್ರೀ ಶ್ರೀಕಾಂತ ಯಲ್ಲಪ್ಪ ಸಾವಕ್ಕನವರ, ಮಾಜಿ ಸದಸ್ಯರು, ಶ್ಯಾಡಗುಪ್ಪಿ ಗ್ರಾಮ ಪಂಚಾಯಿತಿ, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ.

ಪ್ರತಿ ಅಗತ್ಯ ಕ್ರಮಕ್ಕಾಗಿ:

1. ಜಿಲ್ಲಾಧಿಕಾರಿ, ಹಾವೇರಿ ಜಿಲ್ಲೆ, ಹಾವೇರಿ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಜಿಲ್ಲೆ.
3. ತಹಶೀಲ್ದಾರ್, ಹಾನಗಲ್ಲ ತಾಲ್ಲೂಕು, ಹಾವೇರಿ ಜಿಲ್ಲೆ.
4. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಹಾನಗಲ್ಲ, ಹಾವೇರಿ ಜಿಲ್ಲೆ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ಯಾಡಗುಪ್ಪಿ ಗ್ರಾಮ ಪಂಚಾಯತ್, ಹಾನಗಲ್ಲ ತಾಲ್ಲೂಕು, ಹಾವೇರಿ ಜಿಲ್ಲೆ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ.